

**ವಿಶಾಲಾಕ್ಷಿ:** ನಮ್ಮ ಯಜಮಾನರು ಈಗೆಲ್ಲ ಕುಡಿಯೋದನ್ನ ಹಂತ ಹಂತವಾಗಿ ನಿಲ್ಲಿಸ್ತಿದ್ದಾರೆ.
**ವನಜಾಕ್ಷಿ:** ತುಂಬಾ ಸಂತೋಷ ಕಣೆ. ಸದ್ಯ ಒಳ್ಳೆಯದಾದರೆ ಸರಿ.
**ವಿಶಾಲಾಕ್ಷಿ:** ಅಯ್ಯೋ ರಾಮ. ನಾನು ಹೇಳಿದ್ದು ನಿಂಗೆ ಸರಿಯಾಗಿ ಅರ್ಥ ಆದಂಗಿಲ್ಲ. ಜಯನಗರ 1ನೇ ಹಂತ, 2ನೇ ಹಂತ ಬಿಟ್ಟು 3ನೇ ಹಂತದಲ್ಲಿ ಮಾತ್ರ ಕುಡಿಯೋಕೆ ಹೋಗ್ತಿದ್ದಾರೆ. ದಿನೇ ದಿನೇ ಹಂತ ಬಿಡ್ತವ್ರೆ.





**ರಮೇಶ:** ಚಂದ್ರಲೋಕಕ್ಕೆ ಬರ್ತಿಯೇನಪ್ಪ?
**ಆಟೊದವ:** ಬರ್ತೀನಿ ಸರ್. ಆದರೆ ಚಾರ್ಜ್ 900 ಕೋಟಿ ಆಗುತ್ತೆ.
**ರಮೇಶ:** ಆದರೆ, ಇಸ್ರೋದವರು 450 ಕೋಟಿಗೆ ಹೋಗಿದ್ದಾರಲ್ಲ.
**ಆಟೊದವ:** ಹೋಗಿರಬಹುದು. ನಾನ್ ಆ ಕಡೆಯಿಂದ ಒಬ್ಬನೆ ಬರಬೇಕಲ್ವ.

**ಶಿಕ್ಷಕ:** ಗುಂಡ, ಶಂಕರ ಪಾತ್ರೆ ತೊಳೆಯಬೇಕು, ಶಂಕರ ಪಾತ್ರೆ ತೊಳೆಯಲೇಬೇಕು. ಇವೆರಡರಲ್ಲಿರುವ ವ್ಯತ್ಯಾಸವೇನು?
**ಗುಂಡ:** ಮೊದಲನೆಯ ಸಾಲಿನಲ್ಲಿ ಶಂಕರನಿಗೆ ಮದುವೆ ಆಗಿರಲಿಲ್ಲ. ಎರಡನೇ ಸಾಲಿನಲ್ಲಿ ಶಂಕರನಿಗೆ ಗ್ಯಾರಂಟಿ ಮದುವೆ ಆಗಿದೆ ಮೇಡಂ.

**ಕಸ್ಟಮರ್ ಕೇರ್:** ಗುಡ್ ಮಾರ್ನಿಂಗ್ ಸರ್. ಸುಸ್ವಾಗತ, ಹೇಳಿ ನಾನು ಹೇಗೆ ಸಹಾಯ ಮಾಡಲಿ?
**ಗುಂಡ:** ನಮ್ಮ ಮನೆ ಪಕ್ಕದಲ್ಲಿರುವ ಹುಡುಗಿ ಫೋನ್ ನಂಬರ್ ಬೇಕಾಗಿತ್ತು.




**ಗಂಡ:** ಪಕ್ಕದ ಮನೆಯವರ ಹೆಂಡತಿಗೆ ಏನಾಗಿತ್ತಂತೆ? ಅವರು ಸತ್ತಿದ್ದಾದ್ರೂ ಹೇಗೆ?
**ಹೆಂಡತಿ:** ದವಸ ಧಾನ್ಯದ ಬೆಲೆ ಜಾಸ್ತಿಯಾಯಿತು. ಹಾಗಾಗಿ ಸತ್ತು ಹೋದಳು.
**ಗಂಡ:** ಹುಚ್ಚಿಯಂತೆ ಮಾತಾಡಬೇಡ. ದವಸ ಧಾನ್ಯದ ರೇಟು ಜಾಸ್ತಿಯಾದರೆ ಯಾರಾದ್ರೂ ಸಾಯ್ತಾರಾ?
**ಹೆಂಡತಿ:** ನಾನು ಇದೇ ಕಣ್ಣಿನಿಂದ ಡೆತ್ ಸರ್ಟಿಫಿಕೇಟ್ ನೋಡಿದ್ದೀನಿ. ಅದರಲ್ಲಿ ಹಾಗೇ ಬರೆದಿತ್ತು.
**ಗಂಡ:** ಏನಂತ ಬರೆದಿತ್ತು?
**ಹೆಂಡತಿ:** DEATH DUE TO HIGH PULSE RATE ಅಂತ ಬರೆದಿತ್ತು.

**ಗಂಡ:** ಪಲಾವ್‌ನಲ್ಲಿ ಟೂತ್‌ಪೇಸ್ಟ್ ವಾಸನೆ ಬರ್ತಿದೆಯಲ್ಲಾ?
**ಹೆಂಡತಿ:** ಲವಂಗ, ಪುದಿನಾ, ಉಪ್ಪು ಇರ್ಲಿಲ್ಲ. ಪೇಸ್ಟ್‌ನಲ್ಲಿ ಅದೆಲ್ಲ ಇತ್ತಲ್ವಾ... ಅದ್ಕೆ ಅದನ್ನೇ ಸ್ವಲ್ಪ ಹಾಕ್ದೆ.

**ತಿಮ್ಮ:** ಸಂಸ್ಕೃತದಲ್ಲಿ ಹೆಂಡತೀನ ಏನಂತಾರೆ?
**ಗುಂಡ:** ಸಂಸ್ಕೃತದಲ್ಲಷ್ಟೇ ಅಲ್ಲ, ಯಾವ ಭಾಷೆಯಲ್ಲೂ ಏನೂ ಅನ್ನಕ್ಕಾಗಲ್ಲ.

**ಹೆಂಡತಿ:** ಮನೆಯ ಯಾವ ಮೂಲೆಯಲ್ಲಿ ಮುಚ್ಚಿಟ್ಟಿದ್ದರೂ ಹುಡುಕಿ ದುಡ್ಡು ತಗೋತಾನೆ ನಿಮ್ಮ ಮಗ. ಹೀಗಾಗಿ, ಎಲ್ಲಿ ಬಚ್ಚಿಡಬೇಕು ಅಂತಾನೇ ಗೊತ್ತಾಗ್ತಿಲ್ಲ ರೀ...
**ಗಂಡ:** ಅವನ ಪುಸ್ತಕದಲ್ಲಿಡು. ಅವನಿಗೆ ಸಿಗೋದೇ ಇಲ್ಲ.

**ತಿಮ್ಮ:** ಏನ್ ಗುಂಡ ಕೆಲಸ ಸಿಕ್ತಂತೆ. ಯಾವ ಕೆಲಸ?
**ಗುಂಡ:** ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಕೆಲಸ ಸಿಕ್ತು. ತುಂಬಾ ಚೆನ್ನಾಗಿದೆ. ಅಲ್ಲಿ ಸಂಬಳಾನೂ ಕೊಡ್ತಾರೆ.




ಪ್ರೇಮಿಗಳ ದಿನದಂದು ಅಜ್ಜ ಅಜ್ಜಿ ತಮ್ಮ ಯೌವನದ ದಿನಗಳನ್ನು ಮರು ಸೃಷ್ಟಿಸಲು ಮುಂದಾದರು.
ಅಜ್ಜ ಗುಲಾಬಿ ಹೂ ತೆಗೆದುಕೊಂಡು, ಅವರು ಮೊದಲು ಪರಿಚಯವಾದ ಬಸ್‌ಸ್ಟಾಪ್‌ನಲ್ಲಿ ಕಾಯ್ತಾ ಇದ್ದ. ಅಜ್ಜನಿಗೆ ಮೈಯೆಲ್ಲ ರೋಮಾಂಚನ. ಕಾಲು ನಡುಗ್ತಾ ಇತ್ತು. ತುಂಬಾ ಬೆವತು ಬಿಟ್ಟರು. ಎಷ್ಟೇ ಹೊತ್ತು ಕಾದರೂ ಅಜ್ಜಿ ಅಲ್ಲಿಗೆ ಬರಲೇ ಇಲ್ಲ.
ಸಿಟ್ಟಿನಿಂದ ಮನೆಗೆ ಬಂದು, 'ಲೇ... ಬಸ್‌ಸ್ಟಾಪ್‌ಗೆ ಯಾಕೆ ಬರಲಿಲ್ಲ' ಅಂತ ಕೇಳಿದ. ಅದಕ್ಕೆ ಪ್ರತಿಯಾಗಿ ಅಜ್ಜಿ ನಾಚುತ್ತಾ... 'ಸಾರಿ ಜಾನು. ಈ ದಿನ ಪ್ರೇಮಿಗಳ ದಿನ ಅಂತ ನಮ್ಮ ಅಮ್ಮ ನನ್ನನ್ನು ಹೊರಗೆ ಹೋಗೋಕೇ ಬಿಡಲಿಲ್ಲ' ಅಂದಳು.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ